**ಸಿ ಸಿ ಃ 219/2017**
**ಪಿ.ಡಬ್ಲ್ಯೂ ಃ 05**

**ದಿನಾಂಕ ಃ 19/11/2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಃ- ಆರೋಪಿ ಪರ ವಕೀಲರಿಂದ ಃ-**

ನಾನು ಡಿಪ್ಲೋಮೊ ವಿದ್ಯಾಭ್ಯಾಸ ಮಾಡಿದ್ದೇನೆ. ಘಟನೆ ನಡೆದ ದಿನ ನಾನು ನನ್ನ ಅಗಂಡಿಯಲ್ಲಿದ್ದೆ. ಯೋಗೇಶ್ವರ ಏಜೆನ್ಸಿಯ ರಹದಾರಿ ನನ್ನ ಅಣ್ಣ ಹಾಗೂ ನನ್ನ ಹೆಸರಿನಲ್ಲಿದೆ. ನಾವು ನಡೆಸುತ್ತಿರುವ ಏಜೆನ್ಸಿಯ ಶಾಪ್ ಗಳು ನಮ್ಮ ಹೆಸರಿನಲ್ಲಿವೆ. ನಮ್ಮ ಶಾಪ್ ಗಳಿಗೂ ಲಿಫ್ಟಗಳಿಗೂ 5 ಅಡಿಗಳ ಅಂತರ ಇದೆ. ನನ್ನ ಶಾಪ್ ನ ಬಾಗಿಲ ಬಳಿ ನಿಂತರೇ ಲಿಫ್ಟಿನಲ್ಲಿ ಹೋಗುವವರು ಮತುತ ಬರುವವರು ಕಾರಣುತ್ತಾರೆ ಎಂದರೆ ಸರಿ. ನಮ್ಮ ಅಂಗಡಿಯ ಮುಂಭಾಗದಲ್ಲಿ ಕೌಂಟರ್ ಇರುತ್ತದೆ. ಅಲ್ಲಿ ನಿಂತುಕೊಂಡರೇ ಲಿಫ್ಟನಲ್ಲಿ ಹೋಗುವವರು ಮತ್ತು ಬರುವವರು ಕಾಣುತ್ತಾರೆ. ಸಾಮಾನವಾಗಿ ನಮ್ಮ ಶಾಪ್ ನ ಕೌಂಟರ್ ಬಳಿ ಯಾರಾದರೂ ಇರುತ್ತೇವೆ ಎಂದರೆ ಸಾಕ್ಷಿ ಕೆಲವು ವೇಳೆ ಇರುವುದಿಲ್ಲ ಎಂದು ನುಡಿಯುತ್ತಾರೆ. ನಮ್ಮ ಶಾಪ್ ನಮುಂಭಾಗ ಕೋ ಆಫ್ ರೇಟಿವ್ ಬ್ಯಾಂಕ್ ಇದೆ ಎಂದರೆ ಸರಿ. ಅದು ಲಿಫ್ಟ ನಿಂದ 5 ಅಡಿ ಅಂತರದಲ್ಲಿ ಇದೆ ಎಂದರೆ ಸರಿ. ಸದರಿ ಲಿಫ್ಟಗೆ ಎರಡು ಬಾಗಿಲು ಇವೆ ಎಂದರೆ ಸರಿ. ಅವು ಸ್ವಯಂ ಚಾಲಿತ ಬಾಗಿಲು ಗಳು ಅಲ್ಲ ಎಂದರೆ ಸರಿ. ಲಿಫ್ಟ ಮೇಲಿನಿಂದ ಕೆಳಗೆ ಬರಬೆಕಾದರೆ ಒಂದು ಎಂದು ನಮೂದು ಇರುವ ಬಟನ್ ಒತ್ತಬೇಕು ಎಂದರೆ ಸರಿ. ಲಿಫ್ಟ ಕೆಳಭಾಗಕ್ಕೆ ಬಂದ ನಂತರ ಅದರ ಎರಡು ಬಾಗಿಲುಗಳು ಕಾಣುತ್ತವೆ ಎಂದರೆ ಸರಿ. ಲಿಫ್ಟ ಕೆಳಗಡೆ ಬಂದ ನಂತರ ಅದರ ಬಾಗಿಲನ್ನು ತೆರೆದಾಗ ಮಾತ್ರ ಅದು ಓಪನ್ ಅಗುತ್ತದೆ ಎಂದರೆ ಸರಿ. ಬಾಗಿಲುಗಳನ್ನು ತೆರೆದು ಶೆಟರ್ ಅನ್ನು ತೆಗೆದರೆ ಮಾತ್ರ ಲಿಫ್ಟ ಓಪನ್ ಆಗುತ್ತದೆ ಎಂದರೆ ಸರಿ. ಲಿಫ್ಟ ಅನ್ನು ಅಳವಡಿಸಿದಾಗ ನಾನು ಶಾಪ್ ಅನ್ನು ತೆರೆದಿರಲಿಲ್ಲ. ಕೃಷ್ಣರಾಜ ಕುಂಜಿ ಮತ್ತು ಆರೋಪಿಯ

ನಡುವೆ ಕರಾರು ಆದ ನಂತರ ಸದರಿ ಲಿಫ್ಟ ಅನ್ನು ಹಾಕಿಸಲಾಯಿತು ಎಂದರೆ  ಸರಿ. ಅವರ ನಡುವೆ ಆದ ಕರಾರು ಕೇವಲ ಒಂದು ವರ್ಷಕ್ಕೆ ಮಾತ್ರ ಇತ್ತು ಎಂದರೆ ಸಾಕ್ಷಿ ತದನಂತರ ಅದು ನವೀಕರಿಸಲ್ಪಡುತ್ತಿತ್ತು ಎಂದು ನುಡಿಯುತ್ತಾರೆ.   2011 ರಿಂದ   ಕೃಷ್ಣರಾಜ ಕುಂಜಿ ಮತ್ತು  ಆರೋಪಿಯ ನಡುವೆ  ಸದರಿ ಲಿಫ್ಟ ನ ಸಂಬಂಧ ಯಾವುದೇ ಕರಾರು ಆಗಿಲ್ಲ ಎಂದರೆ ನನಗೆ ಗೊತ್ತಿಲ್ಲ.  2011 ರಿಂದ ಇಲಿಲಯವರೆಗೂ ಆರೋಪಿ ಸದರಿ ಲಿಫ್ಟನ  ಮೆಂಟೆನೆನ್ಸ ಸಂಬಂಧ  ಯಾವುದೇ ಕರಾರನ್ನು ಮಾಡಿಕೊಂಡಿಲ್ಲ ಎಂದರೆ ಸಾಕ್ಷಿ  ಕರಾರು ಇದೆ ನಾವು ಆ ಸಂಬಂಧ ಮೆಂಟೆನೆನ್ಸ ಚಾರ್ಜ ಕೊಡುತ್ತಿದ್ದೇವೆ ಎಂದು ನುಡಿಯುತ್ತಾರೆ. ಆ ಸಂಬಂಧ ತನಿಖಾಧಿಕಾರಿಗೆ ದಾಖಲಾತಿ ನೀಡಿದ್ದೇನೆ.   ಯಾವುದೇ ಕರಾರು ಆಗದಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.  ಲಿಫ್ಟ ಬಗ್ಗೆ ನನಗೆ ಎಲ್ಲಾ ವಿಷಯ ಗೊತ್ತು.  ಸುರೇಶ್ ಫರ್ಮ್ ಎಂಬ ಏಜೆನ್ಸಿ ಸದರಿ  ಲಿಫ್ಟ ಅನ್ನು ಮೆಂಟೆನೆನ್ಸ ಮಾಡುತ್ತಿತ್ತು. ಸಾಕ್ಷಿ ಮುಂದುವರೆದು ಒಟ್ಟು 5 ಜನ  ಸದರಿ ಲಿಫ್ಟ ಅನ್ನು ಮೆಂಟೆನೆನ್ಸ ಮಾಡುತ್ತಿದ್ದರು.     ಎಲ್ಲರೂ ಸೇರಿ ಆರೋಪಿಯ ಸಂಗಡ ಒಪ್ಪಂದ ಮಾಡಿಕೊಂಡಿದ್ದೇವು ಎಂದು ನುಡಿಯುತ್ತಾರೆ. ಸದರಿ ಕರಾರನ್ನು ತನಿಖಾಧಿಕಾರಿಗೆ ನೀಡಿಲ್ಲ ಎಂದರೆ ಸರಿ.  ಲಿಫ್ಟ ಅನ್ನು  ನಡೆಸಲು  ಒಬ್ಬ ವ್ಯಕ್ತಿಯನ್ನು ನೇಮಿಸಿಕೊಳ್ಳಬೇಕು ಎಂದು ಷರತ್ತು ಇರುತ್ತದೆ ಎಂದರೆ ಸರಿ. ಸದರಿ ಲಿಫ್ಟ ಗೆ ಯಾವುದೇ ಆಪರೇಟರನ್ನು  ನೇಮಿಸಿಕೊಂಡಿಲ್ಲ.  ನಮ್ಮ ತಂದೆ ಮೆಟ್ಟಿಲು ಮೇಲಿಂದ ಮೃತ ಪಟ್ಟಿದ್ದರೂ   ಹಾಗೂ ಆರೋಪಿ  ಮತ್ತು ನಮ್ಮ ನಡುವೆ ಯಾವುದೇ ಲಿಫ್ಟ ಮೆಂಟೆನೆನ್ಸ ಕರಾರು ಇಲ್ಲದಿದ್ದರೂ  ವಿಮಾ ಪರಿಹಾರ

ಪಡೆಯುವ ಸಲುವಾಗಿ  ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇರುವುದಿಲ್ಲ.**

(ತೆರೆದ  ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ. ಹೇ. ಕೇ. ಸ. ಇ. ಎ.  ಓಪ್ಪಿರುತ್ತಾರೆ,**

**ಪ್ರಧಾನ ದಿವಾಣಿ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ. ಧಾರವಾಡ.**